**ಸಿ.ಸಿ.ನಂ. 389/2025**

**ಪಿ.ಡಬ್ಲೂ-1**

ದಿನಾಂಕ 22-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ- ಆರೋಪಿ ಪರ ಶ್ರೀ.ಐ.ಎಂ.ಜಿ ವಕೀಲರಿಂದ ಃ**

1. ನಾನು ಬಿ.ಎ ವ್ಯಾಸಂಗ ಮಾಡಿದ್ದೇನೆ. ನನಗೆ ಕನ್ನಡ, ಇಂಗ್ಲೀಷ ಓದಲು ಬರೆಯಲು ಬರುತ್ತದೆ. ನನಗೆ ಬ್ಯಾಂಕ ವ್ಯವಹಾರದ ಬಗ್ಗೆ ಮಾಹಿತಿ ಇದೆ. 1 ಲಕ್ಷ ರೂಪಾಯಿಗಿಂತ ಹೆಚ್ಚು ಹಣ ಕೊಡಬೇಕಾದರೆ ಚೆಕ್ಕ ಮೂಲಕ ವ್ಯಹಾರ ಮಾಡಬೇಕು ಎಂದು ಗೊತ್ತಿದೆ ಎಂದರೆ ಸರಿ. ಆರೋಪಿ ಮೊದಲು ಸಾವಳಗಿಯ ಗ್ರಾಮೀಣ ವಿಕಾಸ ಶಿಕ್ಷಣ ಸಂಸ್ಥೆಯಲ್ಲಿ ಶಿಕ್ಷಕಿ ನಂತರ ಬಿ.ಎಲ್.ಡಿ ಪರಿಚಾರಕಿ ಕೆಲಸ ಮಾಡುತ್ತಾರೆ. ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.ನನ್ನ ಹೆಂಡತಿ ಮತ್ತು ಆರೋಪಿ ಕೂಡಿ ಕೆಲಸ ಮಾಡುತ್ತಿದ್ದರು. ಆರೋಪಿ ಗುತ್ತಿಗೆ ನೌಕರರು. ನನ್ನ ಹೆಂಡತಿಗೆ 4,000/- ಸಂಬಳ ಇತ್ತು. ನನ್ನ ಹೆಂಡತಿ ಈಗ ನಮ್ಮ ಕೋಳಿ ಫಾರ್ಮನಲ್ಲಿ ಕೆಲಸ ಮಾಡುತ್ತಾರೆ.

2. ಆರೋಪಿ ಎಷ್ಟು ವರ್ಷದಿಂದ ಬಿ.ಎಲ್.ಡಿಯಲ್ಲಿ ಕೆಲಸ ಮಾಡುತ್ತಾರೆ ನನಗೆ ಗೊತ್ತಿಲ್ಲ. ಆರೋಪಿ ಬೇರೆ ಏನು ಕೆಲಸ ಮಾಡುತ್ತಾರೆ ನನಗೆ ಗೊತ್ತಿಲ್ಲ. ಆರೋಪಿಗೆ ತಿಂಗಳಿಗೆ ಎಷ್ಟು ಸಂಬಳ ಇದೆ ನನಗೆ ಗೊತ್ತಿಲ್ಲ. ಆರೋಪಿ ಹೆಸರಿಗೆ 2 ಗುಂಟೆ ಮನೆ ಸಾವಳಗಿಯಲ್ಲಿ ಇದೆ. ಸದರಿ ಮನೆ ನಂಬರ ಗೊತ್ತಿಲ್ಲ. ಆರೋಪಿ ಮನೆಯಲ್ಲಿ ಅವರು ಮತ್ತು ಇಬ್ಬರು ಗಂಡು ಮಕ್ಕಳು ಇದ್ದಾರೆ ಅವರ ಹೆಸರು ಗೊತ್ತಿಲ್ಲ.

3. ಆರೋಪಿ ಬೇರೆಯವರ ಕಡೆ ಹಣದ ವ್ಯವಹಾರ ಮಾಡುವ ಬಗ್ಗೆ ನನಗೆ ಗೊತ್ತಿಲ್ಲ. ಆರೋಪಿ ಕುಟುಂಬದ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇದೆ. ಆರೋಪಿಯ ಪೂರ್ಣ ಹೆಸರು ವಿಮಲಾಬಾಯಿ ಗಂ. ಬಸನಗೌಡ ನ್ಯಾಮಗೌಡ. ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಫಿರ್ಯಾದಿಯಲ್ಲಿ ಏನು ಬರೆದಿದ್ದಾರೆ ತಿಳಿದುಕೊಂಡಿದ್ದೇನೆ. ನಮ್ಮ ಮನೆಯಲ್ಲಿ 8 ಜನ ಇದ್ದೇವೆ. ನನ್ನ ದೂರಿನಲ್ಲಿ ನಾನು ಕೃಷಿ

ಮಾಡುತ್ತೆನೆ ಎಂದು ಬರೆಸಿಲ್ಲ. ನನ್ನ ಹೆಸರಿಗೆ ಇರುವ ಜಮೀನನ್ನು ಮಾರಾಟ ಮಾಡಿದ್ದೇನೆ. ಅದರ ಸರ್ವೆ ನಂ.126/7, 126/4 ಇವೆ. ಇವು ಸಾವಳಗಿಯಲ್ಲಿ ಇವೆ. ನಾನು ಸಾವಳಗಿಯಲ್ಲಿ electrical material ವ್ಯಾಪಾರ ಮಾಡುತ್ತೇನೆ. ಈಗ ಅಂಗಡಿ ಬಂದ ಮಾಡಿದ್ದೇನೆ. ನಾನು ಈ ವ್ಯಾಪಾರ ಹೊರತುಪಡಿಸಿ ಬೇರೆ ವ್ಯವಹಾರ ಮಾಡುವುದಿಲ್ಲ. ಸದರಿ ವ್ಯಾಪಾರ ಮಾಡಲು ಪರವಾನಿಗೆ ಪಡೆದಿದ್ದೇನೆ, ಸದರಿ ಪರವಾನಿಗೆ ನ್ಯಾಯಾಲಯದ ಮುಂದೆ ಹಾಜರಪಡಿಸಲು ಯಾವುದೇ ತೊಂದರೆ ಇಲ್ಲಾ. ಸದರಿ ವ್ಯಾಪಾರದಿಂದ ಪ್ರತಿ ತಿಂಗಳು 2-3 ಲಕ್ಷ ರೂಪಾಯಿ ಆದಾಯ ಇತ್ತು. ಸದರಿ ವ್ಯಾಪಾರದಲ್ಲಿ ಖರ್ಚು ಹೊರತುಪಡಿಸಿ ತಿಂಗಳಿಗೆ 1 ಲಕ್ಷ ಆದಾಯ ಇತ್ತು. ಸದರಿ ವ್ಯಾಪಾರಕ್ಕೆ ಟಿನ್ನ ನಂಬರ ಇತ್ತು ಅದರ ನಂಬರ ನೆನಪಿಲ್ಲ. ಸದರಿ ದಾಖಲೆ ನ್ಯಾಯಾಲಯದ ಮುಂದೆ ಹಾಜರಪಡಿಸಲು ಯಾವುದೇ ತೊಂದರೆ ಇಲ್ಲಾ. ಸದರಿ ಆದಾಯ ವ್ಯವಹಾರವನ್ನು ಬ್ಯಾಂಕನಲ್ಲಿ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಕೆನರಾ, ಬಿಡಿಸಿಸಿ, ಬ್ಯಾಂಕಗಳಲ್ಲಿ ಖಾತೆ ಇವೆ. ನಾನು ಖಾತೆಯನ್ನು ಸಿಂಡಿಕೇಟ ಬ್ಯಾಂಕನಲ್ಲಿ ತೆಗೆದಿದ್ದೇನು. ನಾನು ಮನೆಯಲ್ಲಿ 1 ಲಕ್ಷ ರೂಪಾಯಿ ಇಟ್ಟಿರುತ್ತಿದ್ದೇನು.

4. ಬ್ಯಾಂಕ ಸ್ಟೆಟಮೆಂಟಗಳನ್ನು ನ್ಯಾಯಾಲಯದ ಮುಂದೆ ಹಾಜರಪಡಿಸಲು ಯಾವುದೇ ತೊಂದರೆ ಇಲ್ಲಾ. ನಾನು ವಿಶೇಷ ಚೇತನ ಎಂದರೆ ಸರಿ. ನಾನು ಅಂಗನ್ಯೂನ್ಯತೆ ದಾಖಲೆ ತೆಗೆಸಿಲ್ಲ. ನಾನು ವಿಶೇಷ ಚೇತನವಾದ ಕಾರಣ ಯಾವುದೇ ವ್ಯಾಪಾರ ವ್ಯವಹಾರ ಮಾಡಲು ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿಯನ್ನು ಹೊರತುಪಡಿಸಿ ಬೇರೆಯವರ ಜೊತೆ ಹಣದ ವ್ಯವಹಾರ ಮಾಡಿದ್ದೇನೆ. 2019-20 ರಲ್ಲಿ ನಾನು ಆರೋಪಿಯನ್ನು ಹೊರತುಪಡಿಸಿ ಕುತುಬುದ್ದಿನ ಕೊಟ್ಯಾಳ ಜೊತೆ ಹಣದ 3 ಲಕ್ಷ 2019 ರಲ್ಲಿ ಹಣದ ವ್ಯವಹಾರ ಮಾಡಿದ್ದೇನೆ. ಸದರಿ ಹಣವನ್ನು ಮನೆಯಲ್ಲಿ ಇದ್ದ ಮೊತ್ತ ನೀಡಿದ್ದೇನು.

5. ನನ್ನ ಮತ್ತು ಆರೋಪಿ ಮಧ್ಯೆ 8 ವರ್ಷಗಳಿಂದ ವ್ಯವಹಾರ ಇದೆ. ಈ ಕೇಸಿನ ವ್ಯವಹಾರ ಹೊರತುಪಡಿಸಿ ಆರೋಪಿ ಜೊತೆ ಬೇರೆ ವ್ಯವಹಾರ ಮಾಡಿಲ್ಲ. ಆರೋಪಿ ತನ್ನ ಗಂಡನ ಆರೋಗ್ಯ

ಚೆನ್ನಾಗಿಲ್ಲದ ಕಾರಣ ಹಣ ಪಡೆದಿದ್ದರು. ಆರೋಪಿಯ ಗಂಡ ಮದ್ಯಪಾನ ವ್ಯಸನಿಯಾಗಿರುವ ಕಾರಣ ಅವರ ಕಿಡ್ನಿ ಮತ್ತು ಲೀವರ ಹಾಳಾಗಿದ್ದವು. ಆರೋಪಿಗೆ ಮೊದಲು 50,000/-, 1 ಲಕ್ಷಗಳಂತೆ ಹಾಗೂ ನನ್ನ ಜಮೀನು ಸರ್ವೆ ನಂ.126/4 ಮಾರಾಟ ಮಾಡಿದ ನಂತರ 4 ಲಕ್ಷ ರೂಪಾಯಿ ಹೀಗೆ ಹಣವನ್ನು ನೀಡಿದ್ದೇನೆ. ಆರೋಪಿಗೆ 2019-20 ರಲ್ಲಿ ಹಣ ನೀಡಿದ್ದೇನೆ ಎಂದು ದೂರಿನಲ್ಲಿ ಬೆರಸಿದ್ದೇನೆ ಎಂದರೆ ಸರಿ. ನನ್ನ ಜಮೀನನ್ನು 2020 ರಲ್ಲಿ ಮಾರಾಟ ಮಾಡಿದ್ದೇನೆ. ಆರೋಪಿ ಗಂಡನಿಗೆ ಯಾವ ಆಸ್ಪತ್ರೇಗೆ ತೋರಿಸಿದ್ದಾರೆ ಎಂದು ನನಗೆ ಹೇಳಿದ್ದರು. ಆರೋಪಿಗೆ ಅವರ ಗಂಡನ ಆಸ್ಪತ್ರೆಯ ಖರ್ಚು ಎಂದು 2019-20 ರಲ್ಲಿ ಹಣ ನೀಡಿದ್ದೇನೆ ಎಂದರೆ ಸರಿ. ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ಗಂಡ ಮೃತಪಟ್ಟಿದ್ದಾರೆ. ಯಾವಾಗ ಮೃತಪಟ್ಟಿದ್ದಾರೆ ಗೊತ್ತಿಲ್ಲ. ಎಲ್ಲಿ ತೀರಿಕೊಂಡಿದ್ದಾರೆ ಗೊತ್ತಿಲ್ಲ. 26-05-2015 ರಲ್ಲಿ ಆರೋಪಿಯ ಗಂಡ ಮೃತಪಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಯ ಗಂಡ 2015 ರಲ್ಲಿ ಮೃತಪಟ್ಟಿರುವ ಕಾರಣ ನನ್ನ ಮತ್ತು ಆರೋೇಪಿಯ ಮಧ್ಯೆ 2019-20 ರಲ್ಲಿ ವ್ಯವಹಾರ ಆಗಿಲ್ಲ ಎಂದು ನುಡಿಯುತ್ತಾರೆ.

6. ದಿಃ 01-04-2020 ರಂದು ಸಿಂಡಿಕೇಟ ಬ್ಯಾಂಕ ಕೆನರಾ ಬ್ಯಾಂಕನಲ್ಲಿ ವಿಲೀನಗೊಂಡಿತು ಎಂದರೆ ಸರಿ. ಆದ್ದರಿಂದ ಸಿಂಡಿಕೇಟ ಬ್ಯಾಂಕನ ಯಾವದೇ ವ್ಯವಹಾರಗಳನ್ನು 01-04-2020 ರಿಂದ ಒಂದು ವರ್ಷದ ಒಳಗೆ ಮಾತ್ರ ಮಾಡಬೇಕು ಎನ್ನುವ ನಿಯಮ ಇತ್ತು ಎಂದರೆ ಸರಿ. ನಿಪಿ-1 ನ್ನು 03-03-2023 ರಂದು ಹಾಜರಪಡಿಸಿದ್ದೇನೆ. ಸಿಂಡಿಕೇಟ ಬ್ಯಾಂಕನಲ್ಲಿ ನನ್ನ ಖಾತೆ ಇದ್ದು ವ್ಯವಹಾರ ಗೊತ್ತಿದ್ದರು ನಿಪಿ-1 ನ್ನು 2023 ರಲ್ಲಿ ಹಾಜರಪಡಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ನನ್ನ ಹೆಸರನ್ನು ಅಜೀತ ರಾವಸಾಬ ಅಲಗೂರ ಸಾಃ ಸಾವಳಗಿರವರು ಬರೆದಿದ್ದಾರೆ. ನಿಪಿ-1 ಕ್ಕೆ ಸಹಿಯನ್ನು ಆರೋಪಿ ಮಾಡಿಲ್ಲ ಎಂದರೆ ಸರಿ. ನಿಪಿ-1 ನ್ನು ಆರೋಪಿ ನನಗೆ ತಾವು ಹಣ ನನ್ನ ಬಳಿಯಿಂದ ಪಡೆಯುವ ಮುಂಚೆಯೆ ಕೊಟ್ಟಿದ್ದರು. ಆಗ ಆರೋಪಿ ಸಹಿ ಮಾಡಿ ಖಾಲಿ ಚೆಕ್ಕನ್ನು ಕೊಟ್ಟು ಹಣ ನಮೂದಿಸಿಕೊ ಎಂದು

ಹೇಳಿದ್ದರು. ಆಗ ಅನೀಲ ರಾಹುಲ ನಾಂದ್ರೆಕರ, ಮಾಹಾದೇವ ಖಂಡು ಚವ್ಹಾನರವರು ಹಾಜರ ಇದ್ದರು ಇನ್ನಿಬ್ಬರು ಪಂಚರ ಹಾಜರ ಇದ್ದವರ ಹೆಸರು ನೆನಪಿಲ್ಲ. ಸದರಿ 4 ಜನ ಪಂಚರ ಸಮಕ್ಷಮ ಆರೋಪಿ ಚೆಕ್ಕ ನೀಡಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ನ್ನು ನಗದಿಕರಣಕ್ಕಾಗಿ ಎರಡು ಸಲ 03-03-2023, 19-05-2023 ರಂದು ಹಾಜರಪಡಿಸಿದ್ದೇನು.

7. ನಿಪಿ-2 ರಲ್ಲಿ ಆರೋಪಿಯ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲಾ ಎಂದು ಮೇಮೋ ನೀಡಿದ್ದರು. ನಿಪಿ-2 ರಲ್ಲಿ cheque invalid since 01-07-2021 ಎಂದು ನಮೂದಿಸಿದ್ದರು ಖಾತೆಯಲ್ಲಿ ಸಾಕಷ್ಟು ಹಣ ಇಲ್ಲಾ ಎಂದು ಸುಳ್ಳು ದೂರು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿಯ ಮಧ್ಯೆ ಯಾವದೇ ವ್ಯವಹಾರ ಆಗಿಲ್ಲದಿದ್ದರೂ ಸುಳ್ಳು ದೂರು ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ. ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ಸಹಿ/-
ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಜಮಖಂಡಿ